# ಮೈಸೂರು ವಿಶ್ವವಿದ್ಯಾನಿಲಯ

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ, ಮೈಸೂರು-570 005

ಸಂಖ್ಯೆ: ಪ.ವಿ. ಆರ್.ವಿ/Noti/2021-22 ದಿನಾಂಕ: 16-11-2021

## ಸುತ್ತೋಲೆ

**ವಿಷಯ:** ನವೆಂಬರ್-2021ರಲ್ಲಿ, ಜರುಗಲಿರುವ (ವಿಶೇಷ ಪರೀಕ್ಷೆ) ಹಾಗೂ 5,6ನೇ ಸೆಮಿಸ್ಟರ್ (ಮೇಕಪ್) ಪದವಿ ಪರೀಕ್ಷೆಗಳ ಬಗ್ಗೆ.

**~***~**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನವೆಂಬರ್ 2021 ರಲ್ಲಿ ನಡೆಯಲಿರುವ ಪದವಿಯ 2,4ನೇ ಹಾಗೂ 5,6ನೇ ಸೆಮಿಸ್ಟರ್ (Make-up) ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಲು ನಿಯಮಾನುಸಾರ ಅವಕಾಶ ಕಲ್ಪಿಸಲಾಗಿದೆ ಹಾಗೂ ಸೆಪ್ಟೆಂಬರ್/ಅಕ್ಟೋಬರ್ 2021ರಲ್ಲಿ ನಡೆದ ಪದವಿ ಪರೀಕ್ಷಾ ಫಲಿತಾಂಶಕ್ಕೆ ಸಂಬಂಧಿಸಿದಂತೆ ಮರುಮೌಲ್ಯಮಾಪನಕ್ಕೆ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪರೀಕ್ಷಾ ಫಲಿತಾಂಶ ಪ್ರಕಟವಾದ ಹದಿನೈದು(15) ದಿನಗಳವರೆಗೆ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಸಹ ಅವಕಾಶ ನೀಡಲಾಗಿದೆ.

ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ ನವೆಂಬರ್ 2021ರಲ್ಲಿ ನಡೆಯಲಿರುವ ಪದವಿ ಪರೀಕ್ಷೆಗಳಿಗೆ (Make-up) ಪಾವತಿಸಿರುವ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡುವಂತೆ ಕೋರುತ್ತಿರುವುದು ಸರಿಯಷ್ಟೆ. ಆದರೆ ನಿಯಮಾನುಸಾರ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಹಾಗೂ 5 ಮತ್ತು 6ನೇ ಸೆಮಿಸ್ಟರ್ (ಮೇಕಪ್) ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದರಿಂದ ಸದರಿ ಪರೀಕ್ಷಾ ಶುಲ್ಕವನ್ನು ಮರುಭರಿಕೆ ಮಾಡಲು ಸಾಧ್ಯವಿರುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

**ಈ ಎಲ್ಲಾ ಅಂಶಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತುರ್ತಾಗಿ ತರತಕ್ಕದ್ದು.**

16/11/21

ಕುಲಸಚಿವ(ಪರೀಕ್ಷಾಂಗ)

ಗೆ,

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಅವಗಾಹನೆಗಾಗಿ ಹಾಗೂ ಪ್ರಕಟಣೆಗಾಗಿ.

ಪ್ರತಿ,

ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರಿಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.